## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 593(578)
2. ಸದಸ್ಯರ ಹೆಸರು : ಶ್ರೀ ವೈ ಎಂ ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 22.07.2024
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಬಳ್ಳಾರಿ ನಗರದಲ್ಲಿನ ಗ್ರಾಮೀಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾಮಗಾರಿಯು ಪ್ರಾರಂಭಗೊಂಡಿದ್ದು ಯಾವಾಗ; ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; ಈ ಕಾಮಗಾರಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದ ಪತ್ರ ಸಂ.ವಿಮ್ಸ್/ಸಾಮಾನ್ಯ-3/29/2010-11 ದಿ:29.04.2010 ರಲ್ಲಿ ವಿಮ್ಸ್ ಸಂಸ್ಥೆಯ ಅಧೀನದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸಲು ಕಟ್ಟಡ ಕಾಮಗಾರಿ, ಉಪಕರಣ ಮತ್ತು ಪೀಠೋಪಕರಣ ಖರೀದಿಯನ್ನೊಳಗೊಂಡ ರೂ.127,74,78,100/- ಗಳ ಅಂದಾಜು ವೆಚ್ಚದ ಯೋಜನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ರೂ.80.00 ಕೋಟಿಗಳಿಗೆ ಸೀಮಿತಗೊಳಿಸಿದ ಅಂದಾಜು ಪಟ್ಟಿಗೆ ಷರತ್ತಿಗೊಳಪಟ್ಟು ಆದೇಶ ಸಂ.ಆಕುಕ 189 ಎಂಪಿಎಸ್ 2009 ದಿ:13.08.2010 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸರ್ಕಾರದ ಅನುಮೋದನೆಯಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಅಧಿಸೂಚನೆ ಸಂ.ವಿಮ್ಸ್/ಸಾಮಾನ್ಯ-3/326/2010-11 ದಿ:06.01.2011 ರ ಪ್ರಕಾರ ಮೆ:ಹೈಗ್ರೀವ ಇನ್ಫ್ರಾಟೆಕ್ ಪ್ರೋಜೆಕ್ಟ್ಸ್ ವಿಶಾಖಪಟ್ಟಣಂ ಇವರಿಗೆ ಒಪ್ಪಿಗೆ ಪತ್ರ ಸಂ.ವಿಮ್ಸ್/ಸಾಮಾನ್ಯ-3/37/2011-12 ದಿ:18.05.2011 ರಲ್ಲಿ ರೂ.73,68,49,457.00 ಗಳಿಗೆ 24 ತಿಂಗಳಲ್ಲಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಆದೇಶ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಆದೇಶ ನೀಡಿದ ದಿನಾಂಕ:06.06.2011 ರಿಂದ 05.06.2013ರ ವರೆಗೆ ಪೂರ್ಣಗೊಳಿಸಬೇಕಾಗಿತ್ತು.<br><br>ಗುತ್ತಿಗೆದಾರರಾದ ಮೆ:ಹೈಗ್ರೀವ್ ಇನ್ಫ್ರಾಟೆಕ್ ಪ್ರೋಜೆಕ್ಟ್ಸ್, ವಿಶಾಖಪಟ್ಟಣಂ ಇವರು ತಮ್ಮ ಪತ್ರ ಸಂ.HIPL/VIMS/S-HOSP/003/ ದಿ.11.12.2012 ರಲ್ಲಿ ಸದರಿ ಕಟ್ಟಡದ ಗುತ್ತಿಗೆ ಅವಧಿಯನ್ನು ಮುಂದುವರೆಸಲು ಕೋರಿದ್ದರು. ಅದರಂತೆ, ಪತ್ರ ಸಂ.ವಿಮ್ಸ್/ಸಿಇವಿ/20161-17 ದಿ.16.06.2017 ರವರೆಗೆ ವಿಸ್ತರಣೆಗಾಗಿ ಪ್ರಸ್ತಾವನೆಯನ್ನು ಏಕ ಕಡತದಲ್ಲಿ ಸಲ್ಲಿಸಲಾಗಿತ್ತು. ಮುಖ್ಯ ಇಂಜಿನಿಯರ್, ಕೆ.ಹೆಚ್.ಎಸ್.ಆರ್.ಡಿ.ಪಿ, ಬೆಂಗಳೂರು ಇವರು ಗುತ್ತಿಗೆ ಅವಧಿ ವಿಸ್ತರಿಸಿದರೂ ಸಹ ಇನ್ನುಳಿದ ಕಾಮಗಾರಿಯನ್ನು ಜೊತೆಜೊತೆಯಾಗಿ ಕೈಗೊಳ್ಳದ ಪಕ್ಷದಲ್ಲಿ ಕಟ್ಟಡವನ್ನು ಸಂಪೂರ್ಣವಾಗಿ ಪೂರ್ಣಗೊಳಿಸುವುದು ಕಷ್ಟಸಾಧ್ಯವೆಂದು ಅಭಿಪ್ರಾಯನ್ನು ನೀಡಿದ ಹಿನ್ನೆಲೆಯಲ್ಲಿ, ಇನ್ನುಳಿದ ಎರಡನೇ ಹಂತದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲು ಸರ್ಕಾರದ ಆದೇಶ ಸಂ.ಆಕುಕ/263/ಎಂಎಂಇ/2014 ದಿ.14.03.2018 ರಲ್ಲಿ ರೂ.1606.86 ಲಕ್ಷಗಳಿಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿರುತ್ತದೆ. ತದನಂತರ ದಿ.06.02.2019 ರಂದು ರೂ.1751.14 ಲಕ್ಷಗಳಿಗೆ ಪರಿಷ್ಕೃತ ಅನುಮೋದನೆ ನೀಡಲಾಗಿತ್ತು. ಮೊದಲನೇ ಮತ್ತು ಎರಡನೇ ಹಂತದ ಕಾಮಗಾರಿಗಳನ್ನು ಜೊತೆಜೊತೆಯಲ್ಲಿ ಕೈಗೊಳ್ಳಲಾಗಿದ್ದು. (1) ಮೊದಲನೇ ಹಂತದ ಕಾಮಗಾರಿಗೆ ಸರ್ಕಾರ ಆದೇಶ ಸಂ.ಎಂಇಡಿ/193/ಎಂಪಿಎಸ್/2022 ದಿನಾಂಕ.17.12.2022 ರಲ್ಲಿ ರೂ. 11203.69 ಲಕ್ಷಗಳು ಮತ್ತು (2)ಎರಡನೇ ಹಂತದ |



Generated from eOffice by Dr VENKATESHA MURTHY V, JS-MED(VMV), JOINT SECRETARY, MEDICAL EDUCATION SEC on 19/07/2024 05:13 PM

<table>
<tr>
<td></td>
<td></td>
<td>ಕಾಮಗಾರಿಗೆ ಸರ್ಕಾರ ಆದೇಶ ಸಂ.ಎಂಇಡಿ/15/ಎಂಪಿಎಸ್/2022 ದಿನಾಂಕ.17.12.2022 ರಲ್ಲಿ ರೂ.2438.00 ಲಕ್ಷಗಳು ಒಟ್ಟು ರೂ.13641.69 ಲಕ್ಷಗಳಿಗೆ ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ. ಪ್ರಸ್ತುತ, ಕಾಮಗಾರಿಯು ಪ್ರಗತಿಯಲ್ಲಿದ್ದು ಸರ್ಕಾರದಿಂದ ಅನುದಾನ ಒದಗಿಸಲಾಗುತಿದೆ. ಸದರಿ ಕಾಮಗಾರಿಯ ಬಗ್ಗೆ ದಿನಾಂಕ.02.11.2023 ರಂದು ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗುತ್ತಿಗೆದಾರರಿಗೆ ಅದಷ್ಟು ಬೇಗನೆ ಕಾಮಗಾರಿಯಲ್ಲಿ ಪೂರ್ಣಗೊಳಿಸಲು ಸೂಚಿಸಲಾಗಿರುತ್ತದೆ. ಕಾಮಗಾರಿಗೆ ಸರ್ಕಾರದಿಂದ ಅನುದಾನವನ್ನು ಒದಗಿಸಲಾಗುತ್ತಿದ್ದು, ಪ್ರಸ್ತುತ ಮೊದಲನೇ ಹಂತದ ಕಾಮಗಾರಿಯು 90% ಪೂರ್ಣಗೊಂಡಿರುತ್ತದೆ ಮತ್ತು ಎರಡನೇ ಹಂತದ ಕಾಮಗಾರಿಯು 92% ಪೂರ್ಣಗೊಂಡಿದ್ದು ಇನ್ನುಳಿದ ಕಾಮಗಾರಿಯು ಬಾಕಿ ಉಳಿದಿರುತ್ತದೆ.<br>ರೂ.ಲಕ್ಷಗಳಲ್ಲಿ<br>
<table>
<tr><th>ಆಡಳಿತಾತ್ಮಕ ಅನುಮೋದನೆ ನೀಡಿದ ಮೊತ್ತ</th><th>ಬಿಡುಗಡೆಯಾದ ಅನುದಾನ</th><th>ವೆಚ್ಚವಾದ ಮೊತ್ತ</th><th>ಬಾಕಿ ಮೊತ್ತ</th></tr>
<tr><td>13641.69</td><td>11372.00</td><td>10840.00</td><td>2269.00</td></tr>
</table>
</td>
</tr>
<tr>
<td>(ಆ)</td>
<td>ಬಂದಿದ್ದಲ್ಲಿ, ನಿರ್ಮಾಣ ಕಾಮಗಾರಿ ಕುಂಠಿತವಾಗಲು ಕಾರಣಗಳೇನು; ನಿಗಧಿತ ಅವದಿಯೊಳಗೆ ಕಾಮಗಾರಿಯನು ಮುಕ್ತಾಯಗೊಳಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ;</td>
<td>ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಪರಿಷ್ಕೃತ ಅಂದಾಜು ಪಟ್ಟಿಗೆ (1)ಮೊದಲನೇ ಹಂತದ ಕಾಮಗಾರಿಗೆ ಸರ್ಕಾರ ಆದೇಶ ಸಂ.ಎಂಇಡಿ/193/ಎಂಪಿಎಸ್/2022 ದಿನಾಂಕ.17.12.2022 ರಲ್ಲಿ 11203.69 ಲಕ್ಷಗಳು ಮತ್ತು (2)ಎರಡನೇ ಹಂತದ ಕಾಮಗಾರಿಗೆ ಸರ್ಕಾರ ಆದೇಶ ಸಂ.ಎಂಇಡಿ/15/ಎಂಪಿಎಸ್/2022 ದಿನಾಂಕ.17.12.2022 ರಲ್ಲಿ ರೂ.2438.00 ಲಕ್ಷಗಳು ಒಟ್ಟು ರೂ.13641.69 ಲಕ್ಷಗಳು ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ ಮೊದಲನೇ ಹಂತ ಮತ್ತು ಎರಡನೇ ಹಂತದ ಕಾಮಗಾರಿಗಳನ್ನು ಜೊತೆಜೊತೆಯಲ್ಲಿ ಕೈಗೊಳ್ಳಬೇಕಾಗಿರುವುದರಿಂದ ಕಾಮಗಾರಿ ಕುಂಠಿತವಾಗಿದ್ದು ಕಾಮಗಾರಿಯನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.</td>
</tr>
<tr>
<td>(ಇ)</td>
<td>ಬಳ್ಳಾರಿಯಲ್ಲಿ ನಿಮಾನ್ಸ್ ಆಸ್ಪತ್ರೆಯ ಸಹಯೋಗ ದೊಂದಿಗೆ ಮಾನಸಿಕ ಆಸ್ಪತ್ರೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಮಾನಸಿಕ ಆಸ್ಪತ್ರೆ ನಿರ್ಮಿಸಲು ಅನುಮತಿ ನೀಡುವುದೇ; ಇಲ್ಲವಾದಲ್ಲಿ ಸಕಾರಣದೊಂದಿಗೆ ಮಾಹಿತಿ ನೀಡುವುದು?</td>
<td>ಇಲ್ಲ</td>
</tr>
</table>

**ಸಂಖ್ಯೆ:** ಎಂಇಡಿ 280 ಎಂಪಿಎಸ್ 2024

(signature)

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.



Generated from eOffice by Dr VENKATESHA MURTHY V, JS-MED(VMV), JOINT SECRETARY, MEDICAL EDUCATION SEC on 19/07/2024 05:13 PM